

(6ನೇ ಪುಟದಿಂದ)

240 ಮೀಟರ್ ಉದ್ದವುಳ್ಳ ಈ ಗುಹೆಯನ್ನು ನೋಡುತ್ತಾ ಸಾಗುತ್ತಿದ್ದರೆ, 'ಭೂಲೋಕದ ಸ್ವರ್ಗವೇನೋ' ಎಂಬ ಭಾವ ಮೂಡುತ್ತದೆ.

ಪ್ರವಾಸಿಗರು ಗುಹೆಯ ಒಳಗೆ ನೋಡಲು ಇಂಗ್ಲಿಷ್ ಅಕ್ಷರ 'ಯು' ಆಕಾರದ ಕಲ್ಲು ಬಂಡೆಯಿಂದ ಕೂಡಿರುವ ದಾರಿಯನ್ನು ಕ್ರಮಿಸಬೇಕು. ಆಗಮಿಸಿದ ದಾರಿಯ ತುಸು ದೂರದಲ್ಲೇ ನಿರ್ಗಮನದ ದಾರಿಯೂ ಇದೆ. ಗುಹೆಯನ್ನು ಪೂರ್ತಿ ನೋಡಿಕೊಂಡು ಬರಲು ಸುಮಾರು ಒಂದು ಗಂಟೆ ಬೇಕಾಗುತ್ತದೆ. ಪ್ರಕೃತಿದತ್ತವಾಗಿ ಅಲ್ಲಿ ರೂಪುಗೊಂಡಿರುವ ಒಂದೊಂದು ಕಲ್ಲಿನ ರಚನೆಗಳ ಕುರಿತೂ ಕುತೂಹಲಕರ ಕಥೆಗಳನ್ನು ಹೇಳಿ, ಕಾವ್ಯಮಯ ಹೆಸರಿನಿಂದ ಕರೆಯುವುದು ಚೀನೀಯರ ಪದ್ಧತಿ. ಕ್ರಿಸ್ಟಲ್ ಪ್ಯಾಲೇಸ್ , ಡ್ರ್ಯಾಗನ್ ಪಗೋಡಾ , ವರ್ಜಿನ್ ಫಾರೆಸ್ಟ್, ಫ್ಲವರ್ ಅಂಡ್ ಫ್ರೂಟ್ ಮೌಂಟನ್ ಮುಂತಾದ ಹೆಸರುಗಳನ್ನು ಕೇಳುತ್ತಿದ್ದಂತೆಯೇ ಅವುಗಳ ಬಗ್ಗೆ ನೀವೇ ಊಹೆ ಮಾಡಿಕೊಳ್ಳಬಹುದು. ಗೈಡ್‌ಗಳೂ ಯಕ್ಷಿಣಿಯರ ಕಥೆಗಳನ್ನು ಬಣ್ಣ ಕಟ್ಟಿ ಹೇಳುತ್ತಾರಂತೆ.

ಗುಹೆಯ ಒಳಗಡೆ ಮಂದ ಬೆಳಕಿರುವ ಕಾರಣ ಸಾಮಾನ್ಯರಿಗೆ ಫೋಟೊ ತೆಗೆಯಲು ಆಗುವುದಿಲ್ಲ. ಆದರೆ ಆಧುನಿಕ ಕ್ಯಾಮರಾ ಹೊಂದಿದವರು ಹಾಗೂ ವೃತ್ತಿಪರ ಫೋಟೊಗ್ರಾಫರ್‌ಗಳು ಮಾತ್ರ ಈ ಸೊಬಗಿನ ದೃಶ್ಯಗಳನ್ನು ಸೆರೆ ಹಿಡಿಯಬಹುದು. ಒಳಭಾಗದಲ್ಲಿ ಗುಹೆಯ ಭಿತ್ತಿಯಲ್ಲಿ ಕೆತ್ತಿರುವ 70ಕ್ಕೂ ಹೆಚ್ಚಿನ ಶಿಲಾಶಾಸನಗಳಲ್ಲಿ , ಟಾಂಗ್ ರಾಜ ಮನೆತನ (618–907)ದ ಅಳ್ವಿಕೆಯಲ್ಲಿ ಕೆತ್ತಲಾದ ಪದ್ಯಗಳನ್ನು ಹಾಗೂ ಪ್ರವಾಸಿಗರು ಬರೆದ ಶಿಲಾಬರಹಗಳನ್ನು ನೋಡಬಹುದು. ಭೂಮಿಯಿಂದ ಕೆಳಭಾಗದಲ್ಲಿರುವ ಈ ವಿಸ್ಮಯಕಾರಿ ಗುಹೆಯೊಳಗೆ ಸೂರ್ಯ ಕಿರಣಗಳು ಬೀಳುವುದು ಅಪರೂಪ. ಬೆಲೆ ಬಾಳುವ ಮಣಿಗಳೊಂದಿಗೆ ಹೊಳೆ ಹೊಳೆಯುವ ಮಿಣುಕು ಹುಳುಗಳೂ ಗುಹೆಯೊಳಗೆ ಕಾಣಸಿಗುತ್ತವೆ.